# ಬೆಂಗಳೂರಿನಲ್ಲಿ ವಿವೇಕಾನಂದರ ಪ್ರತಿಮೆಯ ಅನಾವರಣ

**"ಭಾರತದ ಶಕ್ತಿ, ಅದು ಇತರರ ಅಭಿಪ್ರಾಯಗಳನ್ನು ಗೌರವಿಸುವುದರಲ್ಲಿದೆ"** ಎಂದು ಲೋಕಸಭೆಯ ವಿರೋಧಪಕ್ಷದ ನಾಯಕರಾದ ಶ್ರೀ ಎಲ್. ಕೆ. ಆಡ್ವಾಣಿ ಅವರು ಹೇಳಿದರು. ಅವರು ೧೨.೧. ೨೦೦೯ ರಂದು ಬೆಂಗಳೂರಿನ ರಾಮಕೃಷ್ಣ ಮಠದ ಎದುರು ಇರುವ ರಾಮಕೃಷ್ಣ ಚೌಕದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿರುವ ಸ್ವಾಮಿ ವಿವೇಕಾನಂದರ ಭವ್ಯ ಮೂರ್ತಿಯ ಅನಾವರಣವನ್ನು ನೆರವೇರಿಸಿ ಮಾತನಾಡುತ್ತಿದ್ದರು. ಅವರು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳ ಪ್ರಾಮುಖ್ಯತೆ ಬಗ್ಗೆ ಹೀಗೆ ನುಡಿದರು: "ಸ್ವಾಮಿ ವಿವೇಕಾನಂದರು ತಮ್ಮ ಧರ್ಮವನ್ನು ಎತ್ತಿಹಿಡಿದರು, ಆದರೆ ಅದೇ ಸಮಯದಲ್ಲಿ ಇನ್ನಿತರ ಧರ್ಮಗಳ ಉತ್ತಮ ಅಂಶಗಳನ್ನು ಪ್ರಶಂಸಿಸಿದರು. ಅವರ ಬರವಣಿಗೆಗಳು ಮತ್ತು ಪ್ರವಚನಗಳು ಪ್ರತ್ಯೇಕತಾವಾದ, ಉಗ್ರವಾದ, ಭಯೋತ್ಪಾದನೆ ಮತ್ತು ಯುದ್ಧೋನ್ಮಾದಗಳಿಂದ ತತ್ತರಿಸುತ್ತಿರುವ ಇಂದಿನ ಜಗತ್ತಿಗೆ ಯೋಗ್ಯ ಮಾರ್ಗದರ್ಶನವನ್ನು ನೀಡಬಲ್ಲವು. ಇಂತಹ ಮಹಾನ್ ವ್ಯಕ್ತಿಗಳಿಗೆ ಗೌರವ ತೋರಿಸುವಾಗ ನಾವು ರಾಜಕೀಯ ಹಾಗೂ ಸೈದ್ಧಾಂತಿಕ ನಿಲುವುಗಳನ್ನು ಮೀರಿಹೋಗಬೇಕು. ವಿವೇಕಾನಂದರ ಚಿಂತನೆಗಳು ಸಮಗ್ರ ದೃಷ್ಟಿಯನ್ನು ಹೊಂದಿವೆ. ಅವುಗಳಲ್ಲಿ ಸಾಮಾಜಿಕ ಕಳಕಳಿ ಮತ್ತು ವಿಜ್ಞಾನ–ತಾಂತ್ರಿಕತೆಗಳು ಕೂಡ ಧರ್ಮದ ಜೊತೆ ಜೊತೆಗೇ ಅಗ್ರಸ್ಥಾನವನ್ನು ಪಡೆದಿವೆ. ಹೀಗಾಗಿ ಆ ಚಿಂತನೆಗಳು, ಸಾಂಪ್ರದಾಯಿಕ ಮತ್ತು ಆಧುನಿಕ – ಈ ಎರಡೂ ವರ್ಗದ ಜನತೆಗೆ ಆಪ್ಯಾಯಮಾನವಾಗಿವೆ. ಸ್ವಾಮಿ ವಿವೇಕಾನಂದರು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲಿಲ್ಲವಾದರೂ ಕೂಡ, ಅವರ ವೀರವಾಣಿಗಳು ನಮ್ಮ ದೇಶದ ಜನರಲ್ಲಿ ರಾಷ್ಟ್ರಾಭಿಮಾನವನ್ನು ಮೂಡಿಸಿ, ಆ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಅದಮ್ಯ ಸ್ಫೂರ್ತಿಯನ್ನು ನೀಡಿದವು. ಸ್ವಾಮಿ ವಿವೇಕಾನಂದರು ಸಾಂಪ್ರದಾಯಿಕ ಆಧ್ಯಾತ್ಮಿಕ ನೇತಾರ ಮಾತ್ರವಾಗಿರಲಿಲ್ಲ, ಅವರು ತೀವ್ರ ದೇಶಭಕ್ತರಾಗಿದ್ದರು. ಅವರ ಜೀವನ ಮತ್ತು ಸಂದೇಶಗಳ ಬೆಳಕಿನಲ್ಲಿ ಇಂದಿನ ಯುವ ಭಾರತೀಯರನ್ನು ಸಶಕ್ತಗೊಳಿಸುವುದು ಅವಶ್ಯಕ. ಅದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲು ನಾವು ಪ್ರಯತ್ನಿಸುತ್ತೇವೆ."

ವಿಶ್ವಮಾನವ ಸ್ವಾಮಿ ವಿವೇಕಾನಂದ ಪ್ರತಿಮಾ ಪ್ರತಿಷ್ಠಾನ ಸಮಿತಿ ಟ್ರಸ್ಟ್ ವತಿಯಿಂದ, ರಾಷ್ಟ್ರೀಯ ಯುವದಿನದಂದು ಆಯೋಜಿಸಲಾದ ಭವ್ಯ ಸಮಾರಂಭದಲ್ಲಿ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್, ರಾಜ್ಯದ ರಾಜ್ಯಪಾಲರಾದ ಶ್ರೀ ರಾಮೇಶ್ವರ ಠಾಕೂರ್, ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ ಕೃಷ್ಣ. ಸಂಸತ್ ಸದಸ್ಯರಾದ ಶ್ರೀ ಅನಂತಕುಮಾರ್ ಮತ್ತಿತರ ಗಣ್ಯರು ಭಾಗವಹಿಸಿದ್ದರು.

ಬೆಂಗಳೂರಿನ ರಾಮಕೃಷ್ಣ ಮಠದ ಮಾರ್ಗದರ್ಶನದಲ್ಲಿ ಪ್ರತಿಷ್ಠಾಪನ ಸಮಿತಿಯು ನವೆಂಬರ್ ೨೦೦೭ ರಲ್ಲಿ ನೋಂದಣಿ ಹೊಂದಿತು. ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಸ್ಥಾಪಿಸುವ ಅದರ



ಮಹದೋದ್ದೇಶ ಈಗ ನೆರವೇರಿದಂತಾಗಿದೆ. ಸಮಿತಿಯ ಕಾರ್ಯನಿರ್ವಾಹಕರಾದ ಸ್ವಾಮಿ ಜಪಾನಂದಜಿ ಮಹಾರಾಜ್ ಅವರು ಈ ಯೋಜನೆಯ ರೂಪುರೇಶೆಗಳ ಬಗ್ಗೆ ಪರಿಚಯ ಮಾಡಿಕೊಟ್ಟರು. ಶ್ರೀ ಎಸ್. ಎಂ. ಕೃಷ್ಣ ಅವರು ತಮ್ಮ ವಿದ್ಯಾರ್ಥಿ ದಿನಗಳನ್ನು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕಳೆದದ್ದನ್ನು ನೆನಪು ಮಾಡಿಕೊಂಡರು. ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ತಮ್ಮ ಆಶೀರ್ವಚನದಲ್ಲಿ ಸ್ವಾಮಿ ವಿವೇಕಾನಂದರ ಸಂದೇಶದ ಸಾರಾಂಶವನ್ನು ನೀಡಿದರು. ಅದಲ್ಲದೆ, ಶ್ರೀರಾಮಕೃಷ್ಣ ಚೌಕದಲ್ಲಿ ಪ್ರತಿಷ್ಠಾಪನೆಗೊಂಡಿರುವ ಸ್ವಾಮಿ ವಿವೇಕಾನಂದರ ಪ್ರತಿಮೆಯು ನಮ್ಮ ಮನೆಗಳಲ್ಲಿ ಮತ್ತು ಹೃದಯಗಳಲ್ಲಿ ದಿವ್ಯತೆಯ ಸಾನ್ನಿಧ್ಯವು ಪ್ರವೇಶಿಸಿರುವುದನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ರಾಮೇಶ್ವರ ಠಾಕೂರ್ ಅವರು ರಾಷ್ಟ್ರವನ್ನು ಬಾಧಿಸುತ್ತಿರುವ ವರ್ತಮಾನದ ಸಮಸ್ಯೆಗಳಿಗೆ ಸ್ವಾಮಿ ವಿವೇಕಾನಂದರ ಸಂದೇಶವು ಪರಿಹಾರ ಎಂಬ ಅಂಶವನ್ನು ಒತ್ತಿ ಹೇಳಿದರು. ಸಂಜೆ ನಡೆದ ಸಮಾರಂಭದಲ್ಲಿ ಸ್ವಾಮಿ ನಿತ್ಯಸ್ಥಾನಂದಜಿ, ಶ್ರೀ ಎಂ.ಎನ್. ವೆಂಕಟಾಚಲಯ್ಯ, ಶ್ರೀ ರಾಮ ಜೋಯಿಸ್ ಮುಂತಾದವರು ಭಾಷಣ ಮಾಡಿದರು. ದಿನಾಂಕ ೧೩.೧.೨೦೦೯ ರಂದು ಯುವ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಸ್ವಾಮಿ ಬೋಧಮಯಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಬೇಲಿ ಮಠದ ಸ್ವಾಮೀಜಿ, ಶ್ರೀ ಜಿ.ಎಸ್. ಶಿವರುದ್ರಪ್ಪ ಭಾಗವಹಿಸಿದ್ದರು. ೧೪.೧.೨೦೦೯ ರ ಸಂಜೆಯ ಕಾರ್ಯಕ್ರಮದಲ್ಲಿ ಸ್ವಾಮಿ ಹರ್ಷಾನಂದಜಿ, ಶ್ರೀ ಎಲ್. ಎಸ್. ಶೇಷಗಿರಿರಾವ್, ಶ್ರೀ ಮಹೇಶ್ ಜೋಷಿ ಭಾಗವಹಿಸಿದ್ದರು. ಮೂರೂ ದಿನಗಳಂದು ಪ್ರಖ್ಯಾತ ವಿದ್ವಾಂಸರಿಂದ ಸಂಗೀತ ಕಾರ್ಯಕ್ರಮಗಳು ನಡೆದವು.

# ವಿವೇಕಪ್ರಭ ಪತ್ರಿಕೆಯ ದಶಮಾನೋತ್ಸವ




'ಭಾವಸಾಗರ ಶ್ರೀರಾಮಕೃಷ್ಣ' ವಿಶೇಷ ಸಂಚಿಕೆಯ ಬಿಡುಗಡೆ

"ವಿವೇಕಪ್ರಭ ಪತ್ರಿಕೆಯ ಮೊದಲ ಸಂಚಿಕೆಯ ಬಿಡುಗಡೆಯ ಸಮಾರಂಭದಲ್ಲಿ ನಾನು ಭಾಗವಹಿಸಿದ್ದೆ. ಇಷ್ಟು ಬೇಗ ವರ್ಷಗಳು ಉರುಳಿ, ಈಗ ಈ ಪತ್ರಿಕೆಯು ೧೦ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವುದು ನನಗೆ ಅತ್ಯಂತ ಸಂತೋಷದ ವಿಷಯ. ಇದೊಂದು ಅದ್ಭುತ ಕೆಲಸ; ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುವುದು ಕಷ್ಟ. ಹೀಗಿರುವಾಗ, ವಿವೇಕಪ್ರಭ, ೨೦,೦೦೦ ಪ್ರಸಾರ ಸಂಖ್ಯೆಯನ್ನು ಹೊಂದಿರುವುದನ್ನು ತಿಳಿದು ನನಗೆ ಬಹಳ ಆಶ್ಚರ್ಯವಾಯಿತು" ಎಂದು ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ನುಡಿದರು. ಅವರು ದಿನಾಂಕ ೧.೧.೨೦೦೯ ರಂದು, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ, ವಿವೇಕಪ್ರಭ ಪತ್ರಿಕೆಯ ದಶಮಾನೋತ್ಸವದ ಉದ್ಘಾಟನೆಯನ್ನು ನೆರವೇರಿಸಿ ಆಶೀರ್ವಚನ ನೀಡುತ್ತಿದ್ದರು.

**'ಭಾವಸಾಗರ ಶ್ರೀರಾಮಕೃಷ್ಣ'** ಎಂಬ ಹೆಸರಿನ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದ, ಕೊಡಗಿನ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಜಗದಾತ್ಮಾನಂದಜಿ ಮಹಾರಾಜ್ ಅವರು, "ಮನುಷ್ಯನನ್ನು ಮೇಲಕ್ಕೆತ್ತುವ ಸಂದೇಶವು ಶ್ರೀರಾಮಕೃಷ್ಣರ ಮತ್ತು ವಿವೇಕಾನಂದರ ವಾಣಿಗಳಲ್ಲಿದೆ. ಮನುಷ್ಯನಲ್ಲಿ ಸುಪ್ತಶಕ್ತಿ ಅಡಗಿದೆ. ಅದನ್ನು ಎಚ್ಚರಿಸಿಕೊಂಡರೆ, ಶಕ್ತಿ ಹಿರಿಮೆಗಳು ಪ್ರಾಪ್ತವಾಗುತ್ತವೆ. ಆದರೆ ಸ್ವಾತಂತ್ರ್ಯಾನಂತರದ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ, ಶ್ರೀರಾಮಕೃಷ್ಣರ ಅಥವಾ ಸ್ವಾಮಿ ವಿವೇಕಾನಂದರ ಬಗ್ಗೆಯಾಗಲಿ, ಆಧ್ಯಾತ್ಮಿಕತೆಯ ಬಗ್ಗೆಯಾಗಲಿ ಪ್ರಸ್ತಾಪವೇ ಇಲ್ಲ. ಹೀಗಿದ್ದಾಗ, ಭಾರತ ಉದ್ಧಾರವಾಗುವುದೆಂತು?" ಎಂದು ಹೇಳಿದರು. ಆಂಧ್ರಪ್ರದೇಶದ ಕಡಪಾದಲ್ಲಿನ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ಆತ್ಮವಿದಾನಂದಜಿ ಅವರು, "ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಅವರ ಪ್ರೇರಣೆಯಿಂದ ವಿವೇಕಪ್ರಭ ಪತ್ರಿಕೆ ಆರಂಭಗೊಂಡಿತು. ಉತ್ತಮಮಟ್ಟವನ್ನು ಕಾಯ್ದುಕೊಂಡಿರುವ ಈ ಪತ್ರಿಕೆಯ ಪ್ರಸಾರಕ್ಕೆ ಎಲ್ಲರೂ ಶ್ರಮಿಸಬೇಕು" ಎಂದು ಹೇಳಿದರು. ಮೈಸೂರಿನ ಹಿರಿಯ ಪತ್ರಕರ್ತರಾದ ಶ್ರೀ ಕೃಷ್ಣವಟ್ಟಂ ಅವರು, "ಇಂದಿನ ಸಮಾಜ ಭ್ರಷ್ಟವಾಗಿದೆ. ಪತ್ರಿಕೆಗಳು ಹೊಣೆಯರಿತು ಕೆಲಸಮಾಡುತ್ತಿಲ್ಲ. ಭಾರತಕ್ಕೆ ಆಧ್ಯಾತ್ಮಿಕ ತಳಹದಿ ಇದೆ. ಅದನ್ನು ಎತ್ತಿಹಿಡಿಯುವ ವಿವೇಕಪ್ರಭದಂತಹ ಪತ್ರಿಕೆಗಳ ಆವಶ್ಯಕತೆ ಈಗ ಬಹಳವಾಗಿದೆ" ಎಂದು ಅಭಿಪ್ರಾಯಪಟ್ಟರು. ಬೆಂಗಳೂರಿನ ಖ್ಯಾತ ವಾಗ್ಮಿಗಳಾದ ಡಾ. ಹೆಚ್. ಎನ್. ಮುರಳೀಧರ ಅವರು, "ಶ್ರೀರಾಮಕೃಷ್ಣರಿಗೂ ಪತ್ರಿಕೆಗಳಿಗೂ ಪ್ರತಿಕ್ರಿಯಾತ್ಮಕ ಸಂಬಂಧವಿತ್ತು. ರಾಮಕೃಷ್ಣ ಮಹಾಸಂಘದಿಂದ ಪ್ರಕಟವಾಗುವ ಪತ್ರಿಕೆಗಳಿಗೆ ಅವುಗಳದೇ ಆದ ವೈಶಿಷ್ಟ್ಯ ಇದೆ. **'ವಿವೇಕಪ್ರಭ ಬಹಿರಂಗದಲ್ಲಷ್ಟೇ ಪತ್ರಿಕೆ. ಅಂತರಂಗದಲ್ಲಿ ಅದೊಂದು ಜೀವನದರ್ಶನ. ವಿವೇಕಪ್ರಭ ಇನ್ನೊಂದು ಪತ್ರಿಕೆ ಅಲ್ಲ, ಅದೊಂದು ಬೇರೊಂದು ಪತ್ರಿಕೆ.** ತಮ್ಮ ತಮ್ಮ ಮತಧರ್ಮಗಳ ಪ್ರಚಾರವನ್ನು **ಇತರ ಪತ್ರಿಕೆಗಳು ಮಾಡಿಕೊಂಡರೆ, ವಿವೇಕಪ್ರಭಕ್ಕೆ ಎಲ್ಲರೂ ಇದು ತಮ್ಮ ಪತ್ರಿಕೆ ಎಂದು ಹೇಳಿಕೊಳ್ಳುವ ಸಾಧ್ಯತೆ ಇದೆ"** ಎಂದು ಮಾರ್ಮಿಕವಾಗಿ ವಿಶ್ಲೇಷಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಳಗಾವಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಅವರು, "ಕಳೆದು ಒಂಬತ್ತು ವರ್ಷಗಳಿಂದ ಯಶಸ್ವಿಯಾಗಿ ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವ ಎಲ್ಲ ಕಾರ್ಯಕರ್ತರಿಗೂ ಅಭಿನಂದನೆಗಳು. ಪತ್ರಿಕೆಯೊಂದನ್ನು ನಡೆಸಲು ಅನೇಕ ಸೌಲಭ್ಯಗಳು ಬೇಕು, ಅಪಾರ ಪರಿಶ್ರಮ ಹಾಕಬೇಕು. ಇವೆಲ್ಲವನ್ನೂ ಒಬ್ಬನೇ ವ್ಯಕ್ತಿ ನಡೆಸಿಕೊಂಡು ಬರುವುದು ದುಸ್ಸಾಧ್ಯವೇ ಸರಿ. ನಿಜಕ್ಕೂ **ಪತ್ರಿಕೆಯ ಪ್ರಕಟಣೆ ಒಂದು ಬೃಹತ್ ಯಜ್ಞ.** ಸ್ವಾಮಿ ವಿವೇಕಾನಂದರು ಸ್ವತಃ ಬಂಗಾಳಿ ಪತ್ರಿಕೆಯಾದ **'ಉದ್ಬೋಧನ'** ದ ಪ್ರಕಟಣೆಗೆ ಉತ್ತೇಜನ ನೀಡಿದರು; ದೇಶೀಯ ಭಾಷೆಗಳಲ್ಲಿ ಪತ್ರಿಕೆಗಳು ಆರಂಭವಾಗಬೇಕೆಂದು ಆಶಿಸಿದರು. ಮನುಷ್ಯನನ್ನು ಅಸುರನನ್ನಾಗಿ ಮಾಡುವ ಶಕ್ತಿ ಮಾಧ್ಯಮಗಳಿವೆ. ದೇವನನ್ನಾಗಿ ಮಾಡುವ ಶಕ್ತಿಯೂ ಅವುಗಳಿಗಿವೆ. ವಿವೇಕಪ್ರಭವು ತನ್ನ ಶತಮಾನೋತ್ಸವವನ್ನು ಆಚರಿಸಲಿ ಎಂದು ಪ್ರಾರ್ಥಿಸುತ್ತೇನೆ" ಎಂದು ಹೇಳಿದರು.

ಬೆಳಗ್ಗೆ ೧೦ ರಿಂದ ೧೨.೩೦ ರವರೆಗೆ **'ಅಧ್ಯಾತ್ಮ ಮತ್ತು ಮಾಧ್ಯಮ'** – ಈ ವಿಷಯವಾಗಿ ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು. ಖ್ಯಾತ ಬರಹಗಾರರಾದ ಡಾ. ಸಿ.ಪಿ. ಕೃಷ್ಣಕುಮಾರ್ ಅವರು ಮುಖ್ಯ ಅತಿಥಿಗಳಾಗಿದ್ದರು. ಹೆಸರಾಂತ ಲೇಖಕರಾದ ಪ್ರೊ. ಪ್ರಭುಪ್ರಸಾದ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಿಕಾರಿಪುರ ಕೆ. ಹರಿಹರೇಶ್ವರ, ಡಾ.ಹೆಚ್. ವಿ. ನಾಗರಾಜರಾವ್, ಡಾ. ಹೆಚ್. ರಾಮಚಂದ್ರಸ್ವಾಮಿ, ಡಾ. ಕೆ. ಅನಂತರಾಮು, ಶ್ರೀ ಜಿ. ಎಸ್. ಜಯದೇವ, ಡಾ. ಕೆ. ಎಲ್. ಪ್ರಸನ್ನಾಕ್ಷಿ, ಡಾ. ರೂಪಾ, ಶ್ರೀ ಹೆಚ್.ವಿ. ವಿಶ್ವನಾಥ್, ಮತ್ತು ಶ್ರೀ ವಿ. ರಘು ತಮ್ಮ ಪ್ರಬಂಧಗಳನ್ನು ಮಂಡಿಸಿದರು.

Managing Editor : *Swami Nityasthananda*

Editor : *Swami Vireshananda*

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.